ಕುಂಚ ಪ್ರಪಂಚ






**ಅದಿತಿ ಸಿ.ಡಿ.**
5ನೇ ತರಗತಿ, ಸಾಂದೀಪನಿ ಇಂಗ್ಲಿಷ್ ಹಿರಿಯ ಪ್ರಾಥಮಿಕ ಶಾಲೆ, ಶಿವಮೊಗ್ಗ



**ಆರಾಧನಾ ಕಿರಣ್**
2ನೇ ತರಗತಿ, ಪ್ರೆಸಿಡೆನ್ಸಿ ಸ್ಕೂಲ್, ಬೆಂಗಳೂರು




# ಸೆಲ್ಫಿ ಮತ್ತು ಕುಲ್ಫಿ



■ **ಸೋಮಲಿಂಗ ಬೇಡರ ಆಳೂರ**
ಕಲೆ: ಸಂತೋಷ್ ಸಸಿಹಿತ್ಲು

ಬಾರೆ ಅಕ್ಕ ಬೇಗ ಪಕ್ಕ
ಮೇಲೆ ನೋಡೆ
ಮುಗಿಲ ತಾರೆ
ಹಿಡಿದು ತಾರೆ

ಬಾರೆ ಅಕ್ಕ ಕೂಡು ಲೆಕ್ಕ
ಇಲ್ಲಿ ನೋಡೆ
ಮಾಡು ಸನ್ನೆ
ಇಡುವೆ ಸೊನ್ನೆ

ಬಾರೆ ಅಕ್ಕ ಕೊಡುವೆ ರೊಕ್ಕ
ತೆಗೆದುಕೊಳ್ಳೆ
ನುಂಗು ಮಾತ್ರೆ
ಮಾಡು ಜಾತ್ರೆ

ಬಾರೆ ಅಕ್ಕ ಎಲ್ಲಿ ಸಿಕ್ಕ
ತಮ್ಮ ಹೇಳೆ
ಅವನ ಮೂತಿ
ಕೆಂಪು ಕೋತಿ

ಬಾರೆ ಅಕ್ಕ ಕರೆದು ಬೆಕ್ಕ
ಅಲ್ಲಿ ತೋರೆ
ಇಲಿಯ ಆಟ
ಅದಕೆ ಊಟ

ಬಾರೆ ಅಕ್ಕ ಹೆದರುಪುಕ್ಕ
ಅಲ್ಲಿ ನೋಡೆ
ಚಂದ್ರ ಬಂದ
ಬೆಳಕ ತಂದ

ಬಾರೆ ಅಕ್ಕ ಕುಣಿದು ಥಕ್ಕ
ನನ್ನ ಕೂಡೆ
ಆಡಿಕೊಳ್ಳೆ
ಕಳ್ಳೆಮಿಳ್ಳೆ

ಬಾರೆ ಅಕ್ಕ ಹೊಳೆದು ಚೊಕ್ಕ
ತೋರು ಬಾರೆ
ನಿನ್ನ ಚಂದ
ಮಾವ ಬಂದ

ಬಾರೆ ಅಕ್ಕ ನಿಲ್ಲು ಪಕ್ಕ
ನಾಚ ಬೇಡೆ
ತೆಗೆವೆ ಸೆಲ್ಫಿ
ಕೊಡಿಸು ಕುಲ್ಫಿ! ■

# ಈ ಸಲದ ಮಳೆಗಾಲ

■ **ಕೆ. ನಿರ್ಮಲ ಮರಡಿಹಳ್ಳಿ**

ಮಳೆಗಾಲ ಚೆನ್ನಾಗಾಯ್ತು
ಹಳ್ಳ ಕೊಳ್ಳ ತುಂಬಿಕೊಳ್ತು
ಹಸಿರು ಹೊಳೆ ಹೊಮ್ಮಿ ಬಂತು
ಬೆಟ್ಟ ಬಯಲು ಹಚ್ಚಗಾಯ್ತು
ನಾಡು ಸೀಮೆ ಚೊಕ್ಕವಾಯ್ತು
ಮುಗಿಲಮೋರೆ ನಿಚ್ಚಳಾಯ್ತು
ನೆಲ ನೋಡಿ ನಕ್ಕಂಗಾಯ್ತು
ಹೂವು ಅರಳಿ ನಿಬ್ಬೆರಗಾಯ್ತು
ಬಳ್ಳಿ ಮರವ ಹಬ್ಬಿಕೊಳ್ತು
ಮರ ಆಕಾಶ ಮುಟ್ಟಿದಂಗಾಯ್ತು
ಕಾಡೆಲ್ಲಾ ಜೊಂಪಾಯ್ತು
ಎಲ್ಲೆಂದ್ರಲ್ಲೆ ನೀರು ನುಗ್ತು
ಮನೆ ಮಾರು ಕೊಚ್ಚಿ ಹೋಯ್ತು
ಸೇತ್ವೆ ರಸ್ತೆ ಕಿತ್ತು ಹೋಯ್ತು
ಒಟ್ನಲ್ಲಿ ಭೂಮಿ ತಣ್ಣಗಾಯ್ತು ■